ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿ ಕೊಂಡಿಲ್ಲವೆಂದು ಕಾಣುತ್ತದೆ. ಈಗಿರುವ ಕಟ್ಟಡ ಪ್ರಾಥಮಿಕ ಶಾಲೆಗೆ ಆಷ್ಟೊಂದು ಅನುಕೂಲವಾದ ಕಟ್ಟಡವಲ್ಲ. ಅದು ಹಳೆ ಸರ್ಕಾರಿ ಕಟ್ಟಡ. ಅಲ್ಲಿ ಸ್ಥಳಾವಕಾಶ ಕಡಿಮೆ ಇದೆ. ಅದೇ ಜಾಗದಲ್ಲಿ ಹೊಸ ಕಟ್ಟಡ ಕಟ್ಟಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಬಿದ್ದುಹೋಗಿರುವ ಕಟ್ಟಡವನ್ನು ಹರಾಜು ಹಾಕಿ, ಬೇರೊಂದು ವಿಶಾಲವಾದ ಜಾಗದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡಿ ಎಂದು ಮಾನ್ಯ ದೇವೇ ಗೌಡರು ಕೇಳುತ್ತಿದ್ದಾರೆ. ಇದು ತಮಗೆ ಅರ್ಥವಾಗಲಿಲ್ಲವೆಂದರೆ ನಾನೇನುಮಾಡಲಿ?

ಶ್ರೀ ಮುಳ್ಳೂರು ಆನಂದರಾವ್.—ನಾನು ಹೇಳುತ್ತಿರುವುದೇನೆಂದರೇ...

ಶ್ರೀ ಹೆಚ್.ಡಿ. ದೇವೇಗೌಡ.—ನೀತಿ ಪ್ರಶ್ನೆ ಬಗ್ಗೆ ಮಾನ್ಯ ಸದಸ್ಯರು ಶಿಕ್ಷಣ ಇಲಾಖೆಯ ಬೇಡಿಕೆ ಸಂದರ್ಭದಲ್ಲಿ ಮಾತನಾಡಲಿ.

ಅಧ್ಯಕ್ಷರು.—ಇದು ಸ್ಥಳೀಯ ಸಮಸ್ಯೆ. ಮಾನ್ಯ ದೇವೇಗೌಡರು ಮಾತನಾಡಬಹುದು.

ಶ್ರೀ ಹೆಚ್.ಡಿ. ದೇವೇಗೌಡ.—ಸರ್ಕಾರದ ನೀತಿ ಏನಿರಬಹುದು ಮಾನ್ಯ ಸದಸ್ಯರು ಶಿಕ್ಷಣ ಇಲಾಖೆ ಬೇಡಿಕೆ ಸಂದರ್ಭದಲ್ಲಿ ಮಾತನಾಡಲಿ. ನಮ್ಮ ಕಷ್ಟ ನಮಗೆ. ಈ ಕಟ್ಟಡವನ್ನು ಯಾವಾಗ ಕಟ್ಟಿದ ರೆಂಬುದು ನಮಗೇ ಗೊತ್ತಿಲ್ಲ. ಶ್ರೀ ಕೃಷ್ಣರಾಜಒಡೆಯರ್ ಅವರ ಕಾಲದಲ್ಲಿ ಕಟ್ಟಿದ್ದಂತೆ. ಅಂದಿಗೆ ಸುಮಾರು ೫೦-೬೦ ಜನಸಂಖ್ಯೆ ಇದ್ದಿತ್ತೇನೋ. ಆದರೆ, ಇಂದು ಅಲ್ಲಿ ಸುಮಾರು ಐದು ಸಾವಿರ ಜನ ಸಂಖ್ಯೆ ಇದೆ. ಈ ಕಟ್ಟಡಗಳು ಊರಿನ ಮಧ್ಯ ಭಾಗದಲ್ಲಿವೆ. ಇವು ಸಣ್ಣ ಕಟ್ಟಡಗಳಾಗಿದ್ದು ಅಲ್ಲಿ ೮೫ ಮಕ್ಕಳು ಕುಳಿತು ಓದುವುದಕ್ಕೆ ಸಾಧ್ಯವಿಲ್ಲ. ಆಲ್ಲಿ ನಿವೇಶನ ಬೆಲೆ ಹೆಚ್ಚು ಇದೆ. ಅವುಗಳನ್ನು ಹರಾಜು ಹಾಕಿಸಿದರೆ ಹೆಚ್ಚಿಗೆ ಹಣ ಬರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಯವರು ಮತ್ತು ನಾನು ಖುದ್ದು ಪರಿಶೀಲನೆ ಮಾಡಿದ್ದೇವೆ. ಇದೇ ಊರಿನ ಮೇಲುಗಡೆ ಸುಮಾರು ನಾಲ್ಕೈದು ಎಕರೆ ಭೂಮಿ ಇದೆ. ಅಲ್ಲಿ ಹೊಸ ಕಟ್ಟಡವನ್ನು ಕಟ್ಟಿಸಲು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಂದಾಜನ್ನು ತರಿಸಿ, ಸರ್ಕಾರ ಪರಿಶೀಲಿಸುವುದೆ?

ಶ್ರೀ ಜಿ.ಬಿ. ಶಂಕರರಾವ್ —ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ, ಅಂದಾಜು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ, ಅಲ್ಲಿ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನ ಮಾಡಲಾಗುವುದೆಂದು ಭರವಸೆ ಕೊಡುತ್ತೇನೆ.

Proposal to construct E.S.I. Hospital, Davanagere

791 SMT. C. NAGAMMA KESHAVAMURTHY (Mayakonda).—Will the Minister for Labour, Small Scale Indnstries, Food and Wakfs be pleased to state: -

(a) was there a prop sal to construct a 60 bed E.S.I. Hospital, Davanagere;

(*b*) if so, whether the land has been purchased; If not, the reasons for the long delay;

(*c*) when will the Hospital construction work will be taken up?

SRI C.M. IBRAHIM (Minister for Labour, Small Scale Industries, Food and Wakfs).—

(a) There is a proposal to construct 50 bedded E.S.I. Hospital at Davanagere.

(*b*) Acquisition of land is under progress. In the meanwhile possession of land measuring 5.26 acres has been taken on 21-5-80.

(*c*) Plans and Estimates are being prepared. Construction will be taken up soon after plans and estimates are approved by the E.S.I. Corporation, New Delhi.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.— ದಾವಣಗೆರೆಯಲ್ಲಿ ಇ. ಎಸ್. ಐ. ಆಸ್ಪತ್ರೆ ಕಟ್ಟುವ ಸಲುವಾಗಿ ೧೯೭೨ ರಿಂದಲೂ ಭೂಸ್ವಾಧೀನದ ಪ್ರಶ್ನೆ ಬಂದಿತ್ತು, ಕೇಂದ್ರ ಮತ್ತು ರಾಜ್ಯದ ಸಂಬಂಧ ಪಟ್ಟ ಅಧಿಕಾರಿಗಳು ನಾಲ್ಕೈದು ಸಲ ಅಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ. ಈಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹಳ ಸಂತೋಷ. ಆದರೆ, ದೆಹಲಿಯ ಇ. ಎಸ್. ಐ. ನಿಗಮದವರಿಂದ ನಕ್ಷೆಗಳ ಹಾಗೂ ಅಂದಾಜು ಪೆಚ್ಚಕ್ಕೆ ಅನುಮತಿ ದೊರೆತ ಕೂಡಲೇ ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕಳೆದ ಎಂಟು-ಹತ್ತು ವರ್ಷಗಳಿಂದ ಈ ಆಸ್ಪತ್ರೆಯ ಪ್ರಶ್ನೆ ಹಾಗೇ ಉಳಿದಿರುವುದರಿಂದ ಈ ವರ್ಷದಲ್ಲೇ ನಕ್ಷೆ ಮತ್ತು ಅಂದಾಜನ್ನು ಮಂಜೂರು ಮಾಡಿಸಿ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನಿಸುವಿರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಪರಿಶೀಲಿಸುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.— ದಾವಣಗೆರೆಯಲ್ಲಿ ಸುಮಾರು ಇಪ್ಪತ್ತು ಸಾವಿರದಷ್ಟು ಕಾರ್ಮಿಕರಿದ್ದಾರೆ. ಐವತ್ತು ಹಾಸಿಗೆಯ ಆಸ್ಪತ್ರೆಯನ್ನು ಅಲ್ಲಿ ನಿರ್ಮಿಸುವ ಸೂಚನೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ನೂರು ಹಾಸಿಗೆಯ ಆಸ್ಪತ್ರೆಯನ್ನು ಕಟ್ಟಿಸಬೇಕಾದುದು ಬಹಳ ಅವಶ್ಯಕವೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಅಲ್ಲಿ ಇಪ್ಪತ್ತು ಸಾವಿರ ಕಾರ್ಮಿಕರಿರಬಹುದು. ಆದರೆ, ಇ.ಎಸ್.ಐ. ಯೋಜನೆಯಡಿ ಬರತಕ್ಕವರು ಸುಮಾರು ೧೨,೬೦೦ ಕಾರ್ಮಿಕರು ಮಾತ್ರ ಇರುತ್ತಾರೆ. ಒಂದು ಸಾವಿರ ಕಾರ್ಮಿಕರಿಗೆ ನಾಲ್ಕು ಹಾಸಿಗೆ ಇರಬೇಕೆಂಬ ನಿಯಮ ಸಹ ಇದೆ. ಈಗ ತಾತ್ಕಾಲಿಕವಾಗಿ ಐವತ್ತು ಹಾಸಿಗೆ ಆಸ್ಪತ್ರೆಗೆ ಅವಕಾಶವಿದೆ. ಉಳಿದ ಕಾರ್ಮಿಕರನ್ನೂ ಸೇರಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುವುದಾದರೆ, ಇದನ್ನು ವಿಸ್ತರಣಾ ಯೋಜನೆಯಲ್ಲಿ ಸೇರಿಸಿ ನೂರು ಹಾಸಿಗೆ ಆಸ್ಪತ್ರೆಯನ್ನಾಗಿ ಮಾಡಬಹುದು.

ಶ್ರೀಮತಿ ನಾಗಮ್ಮ ಕೇಶವಮೂರ್ತಿ. - ಸ್ವಾಮಿ, ೫ ಎಕರೆ ೨೦ ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ೧೦೦೦ ಬೆಡ್ ಇರತಕ್ಕ ದಾವಣಗೆರೆ ಜನರಲ್ ಆಸ್ಪತ್ರೆ ಏನಿದೆ, ಅದರ ಪಕ್ಕದಲ್ಲಿಯೇ ಜಮೀನನ್ನು ಸ್ವಾಧೀನ ಪಡಿಸಿಕೊಂಡರೆ ಜನರಲ್ ಆಸ್ಪತ್ರೆಯಲ್ಲಿರತಕ್ಕ ತಜ್ಞ ವೈದ್ಯರಂ ಇ ಎಸ್.ಐ. ಆಸ್ಪತ್ರೆಗೆ ಹೋಗಿ ಅವರ ಸೇವೆಯನ್ನು ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಅದಕ್ಕೆ ಸಂಬಂಧಪಟ್ಟಂತ ಸಮಿತಿ ಇದೆ. ಅಧಿಕಾರಿಗಳು ಮತ್ತು ಸಮಿತಿಯವರು ಪರಿಶೀಲನೆ ಮಾಡಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

Minimum Wages to Power Loom Weavers and Workers

824 SRI V. V. PATTAR (Jamkhandi) —Will the Minister for Labour, Small Scale Industries, Food and Wakfrs be pleased to state :—

(*a*) whether it is a fact that the power loom owners are not paying minimum wages to power loom weavers and workers ;